# ಆಹಾ ಸುದ್ದಿ!

★ ಸಸಿತೋಟ

ಬೆಲ್ಜಿಯಂನಲ್ಲಿ ನಡೆದ ಚಾಕೊಲೇಟ್ ಉತ್ಸವದಲ್ಲಿ ರೂಪದರ್ಶಿಯೊಬ್ಬಳು ಪ್ರದರ್ಶಿಸಿದ ಚಾಕೊಲೇಟ್ ಉಡುಪಿದು. ಸಂಪೂರ್ಣ ಚಾಕೊಲೇಟ್‌ನಿಂದಲೇ ಮಾಡಿದ್ದಂತೆ. ಊಟ ಮಾಡಿದ ನಂತರ ತಿನ್ನುವ ಪ್ಲೇಟ್, ಚಮಚವೂ ಬಂದಿದೆಯಂತೆ. ಅದೇ ರೀತಿ ತೊಟ್ಟ ಈ ದಿರಿಸನ್ನೂ ತಿಂದುಬಿಟ್ಟರೆ ಸುತ್ತಮುತ್ತಲಿನ ಪರಿಸರ ಮಾಲಿನ್ಯವೂ ತಪ್ಪುತ್ತದೆ, ಸ್ವತಃ ದೇಹ ಮಾಲಿನ್ಯವೂ ತಪ್ಪುತ್ತದೆ!



ಕ್ಯಾಲಿಫೋರ್ನಿಯಾದ ಬಾಬ್ ಎಂಬಾತನ ಹಳೆಯ ಅಂಗಿಯೊಂದನ್ನು ಆತನ ಹೆಂಡತಿ ಸ್ವಯಂ ಸೇವಾ ಸಂಸ್ಥೆಗೆ ದಾನ ಮಾಡಿದ್ದಳಂತೆ. ಎಷ್ಟೋ ದಿನಗಳ ನಂತರ ಈ ಸಂಗತಿ ಗೊತ್ತಾದ ಬಾಬ್ ಸಂಸ್ಥೆಯ ಕಚೇರಿಗೆ ತೆರಳಿ ತನ್ನ ಅಂಗಿಯನ್ನು ಹುಡುಕಿ ಹೈರಾಣಾದನಂತೆ. ಹೆಂಡತಿಗೂ ನಿಜ ಸಂಗತಿ ಹೇಳದ ಬಾಬ್, ಆ ಅಂಗಿಯಲ್ಲಿ 8 ಸಾವಿರ ಡಾಲರ್ ಹಣವಿತ್ತು ಎಂದು ಅಲ್ಲಿ ಬಾಯ್ಬಿಟ್ಟನಂತೆ. ಹೆಂಡತಿಗೆ ಹೇಳಬೇಡಿ ಎಂಬುದು ಈ ರೀತಿ ಬಹಿರಂಗವಾಗಬಾರದಿತ್ತು.

ಕಾಂಬೋಡಿಯಾದಲ್ಲಿರುವ ಚೀನಿ ವ್ಯಕ್ತಿಯೊಬ್ಬ ತನ್ನ ನಾಲಗೆಯನ್ನೇ ಕತ್ತರಿಸಿಕೊಂಡು ಅತೃಪ್ತ ಆತ್ಮಗಳಿಗೆ ಸಮರ್ಪಣೆ ಮಾಡುತ್ತಿರುವ ಚಿತ್ರವಿದು. ಚೀನಿಯರ ನೂತನ ವರ್ಷಾಚರಣೆಯ ಸಂದರ್ಭದಲ್ಲಿ ಈ ಭಯಾನಕ ಸಂಪ್ರದಾಯಗಳು ನಡೆಯುತ್ತವಂತೆ. ವರ್ಷಾರಂಭದಲ್ಲೇ ಈ ರೀತಿ ಮಾಡಿಕೊಳ್ಳುವ ಬದಲು ವರ್ಷವಿಡೀ ಆಡಬಾರದ್ದನ್ನೆಲ್ಲ ಆಡಿ ಕೊನೆಯಲ್ಲಿ ಈ ರೀತಿ ಶಿಕ್ಷೆ ಕೊಟ್ಟುಕೊಂಡಿದ್ದರೆ ಸರಿಯಿತ್ತು.





ಇದು ಚೀನಾದ ಐಸ್ ಪ್ಯಾಲೇಸ್ ಹೋಟೆಲ್. ಎಲ್ಲವೂ ಮಂಜುಮಯ. ಡ್ರಿಂಕ್ಸ್ ಸುರಿಯುವುದೂ ಮಂಜುಗಡ್ಡೆಯಿಂದ ಮಾಡಿದ ಕಪ್‌ಗಳಲ್ಲಿ. ಡ್ರಿಂಕ್ಸ್‌ಗೆ ಹೊಸದಾಗಿ ಮಂಜುಗಡ್ಡೆ ಸೇರಿಸುವ ಅಗತ್ಯವೇ ಅಲ್ಲಿ ಇಲ್ಲ.



ಅಮೆರಿಕದವರಿಗೆ ಮೊಸಳೆಯೆಂದರೆ ಪ್ರಿಯವಂತೆ. ಹಾಗೆಯೇ ಹಲವರಿಗೆ ಅಧ್ಯಕ್ಷ ಟ್ರಂಪ್ ಬಗ್ಗೆಯೂ ಲವ್–ಹೇಟ್ ಸಂಬಂಧ. ದಕ್ಷಿಣ ಕೆರೊಲಿನಾದಲ್ಲಿ ಕಿತ್ತಳೆ ಬಣ್ಣದ ಮೊಸಳೆಯೊಂದು ಪತ್ತೆಯಾಗಿದೆಯಂತೆ. ಇನ್ನೇಕೆ ತಡ, ರಾಡಿ ಜವುಗಿನಲ್ಲಿ ವಾಸಿಸುವ ಅದಕ್ಕೆ ಟ್ರಂಪ್‌ಗೇಟರ್ (ಆ್ಯಲಿಗೇಟರ್ ಎಂದರೆ ಮೊಸಳೆಯಲ್ಲಿ ಒಂದು ವಿಧ) ಎಂದು ನಾಮಕರಣ ಮಾಡಿಯೇ ಬಿಟ್ಟರು. ವೈಟ್‌ಹೌಸ್‌ನಲ್ಲಿ ವಾಸಿಸುವ ಟ್ರಂಪ್ ತಮ್ಮ ಮುಖವನ್ನು ಮತ್ತೆ ಮತ್ತೆ ಒರೆಸಿಕೊಳ್ಳುತ್ತಿರಬಹುದು.

ಸ್ವೀಡನ್ನಿನ ಕ್ರಿಸ್ಪ್ ಎಂಬ ಸಾಫ್ಟ್‌ವೇರ್ ಕಂಪೆನಿಯಲ್ಲಿ ಕಾಯಂ ಸಿಇಒ ಇಲ್ಲವಂತೆ. ಉದ್ಯೋಗಿಗಳೇ ಪಾಳಿ ಪ್ರಕಾರ ಸಿಇಒ ಆಗುವ ಮಜಾ ಅನುಭವಿಸ್ತಾರಂತೆ, ತಮಿಳುನಾಡಿನ ಸಿಎಂ ಗಾದಿಯ ಹಾಗೆ.